ಓ.ಎಸ್ 231/2017 ಪಿ.ಡಬ್ಲ್ಯೂ-1

ಸಾಕ್ಷಿಯನ್ನು ದಿನಾಂಕ 23-09-2019 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಶ್ರೀ ಎಂ ಬಿ ಎನ ವಕೀಲರಿಂದ ಮುಂದುವರೆದ ಪಾಟೀ ಸವಾಲುಃ**

4. ನನ್ನ ತಂದೆಯ ಮಾನಸಿಕ ಸ್ಥಿತಿ ಸರಿ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ ಮೊದಲು ಕಚ್ಚಾ ಮೃತ್ಯುಪತ್ರವನ್ನು ಬರೆಸಿ ಅದನ್ನು ಓದಿ ನೋಡಿಸಿ ಸರಿ ಇದೆ ಎಂದು ಖಾತರಿಪಡಿಸಿಕೊಂಡು ನೊಂದ ಮಾಡಿಸಿದ್ದಾರೆಂದರೆ ಸರಿಯಲ್ಲ. ಕುಬೇರಪ್ಪ ಹನಮಸಾಗರ ನನ್ನ ತಂಗಿಯ ಗಂಡ ಗೊತ್ತು. ಬಿ ಎಸ ಗಲಗಲಿ ಮತ್ತು ಶಿವಾಜಿ ಮಾನೆ ಯಾರು ಎಂದು ಗೊತ್ತಿಲ್ಲ. ಸದರಿ ಹನಮಸಾಗರ ಮತ್ತು ಇತರರು ಸಮಕ್ಷಮವೇ ಆ ಮೃತ್ಯು ಪತ್ರವನ್ನು ಬರೆದು ಸಾಕ್ಷಿಯಾಗಿ ಬರೆದುಕೊಟ್ಟಿದ್ದಾರೆಂದರೆ ಸರಿಯಲ್ಲ ನನಗೆ ಮೋಸ ಮಾಡಲು ಮಾಡಿದ್ದಾರೆಂದು ಸಾಕ್ಷಿ ನುಡಿಯುತ್ತಾಳೆ. ನನ್ನ ತಂದೆ ಮುಂದೆ ಆಸ್ತಿ ವಿಚಾರವಾಗಿ ಯಾವುದೇ ತಂಟೆ ತಕರಾರು ಬರಬಾರದು ಎಂದು 1983 ರಲ್ಲಿಯೇ ಬರೆದು ನೊಂದ ಮಾಡಿಸಿ ಇಟ್ಟಿದ್ದರು ಎಂದರೆ ಸಂರಿಲ್ಲ. ನನ್ನ ತಂದೆ ಮಾಡಿದ್ದ ಮೃತ್ಯುಪತ್ರ ಕಾನೂನು ಬದ್ಧವಾಗಿದೆ ಎಂದರೆ ಸರಿಯಲ್ಲ ಅವರು ಮೃತ್ಯುಪತ್ರ ಮಾಡಿಯೇ ಇಲ್ಲ. ಸದರಿ ಮೃತ್ಯುಪತ್ರದಂತೆ ಎಲ್ಲರೂ ನಡೆದುಕೊಂಡಿದ್ದಾರೆಂದರೆ ಸರಿಯಲ್ಲ ಅವರೆಲ್ಲರೂ ಸೇರಿ ನನಗೆ ಮೋಸ ಮಾಡಿದ್ದಾರೆ. ಈ ದಾವೆಯಲ್ಲಿ ಆ ಮೃತ್ಯುಪತ್ರದ ದೃಢೀಕೃತ ನಕಲು ಹಾಜರಪಡಿಸಿದ್ದೇನೆಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮೃತ್ಯುಪತ್ರ ಮಾಡಿಕೊಟ್ಟಿದ್ದು ನನಗೇಲ್ಲಾ ಗೊತ್ತಿದ್ದರೂ ಸಹ ಈಗ ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆಂದು ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನಗೆಲ್ಲಾ ಗೊತ್ತಿದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಉಳಿದ ಪ್ರತಿವಾದಿಯರ ಪರ ಪಾಟೀ ಸವಾಲಿಗೆ ವೇಳೆ ಕೇಳಿ ಪ್ರಕರಣ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ , ಹುಬ್ಬಳ್ಳಿ